ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ವಿಶ್ವವಾಣಿ
ಬೆಂಗಳೂರು
vishwavani.news
11.01.2019 ಶುಕ್ರವಾರ

ಸಂಪಾದಕೀಯ

## ಮೀನುಗಾರರ ಕಣ್ಮರೆ

ಪಶ್ಚಿಮ ಸಮುದ್ರದಲ್ಲಿ ಮೀನು ಹಿಡಿಯಲು ಹೋಗಿದ್ದ ಕರ್ನಾಟಕದ ಕರಾವಳಿ ಜಿಲ್ಲೆಯ ಏಳು ಮಂದಿ ಮೀನುಗಾರರು ಡಿ.16ರಿಂದ ನಾಪತ್ತೆಯಾಗಿದ್ದಾರೆ ಎಂಬ ವಿಚಾರ ಕಳವಳಕಾರಿ. ಡಿ.13ರಂದು ಗೋವಾದ ಒಂದು ಬಂದರಿನಿಂದ ಹೊರಟ ಈ ಮೀನುಗಾರರು ದೂರ ಸಮುದ್ರದಲ್ಲಿ ಮೀನುಗಾರಿಕೆ ನಡೆಸಿ, ತಾವು ಸಂಗ್ರಹಿಸಿದ ಮೀನಿನೊಂದಿಗೆ 10 ದಿನಗಳಲ್ಲಿ ವಾಪಸ್ ಆಗಬೇಕಿತ್ತು. ಆದರೆ ಎರಡು ದಿನಗಳ ಅವಧಿಯಲ್ಲೇ ಮೀನುಗಾರರ ಸಂಪರ್ಕ ಕಡಿದುಹೋಯಿತು. ಅವರು ಮೀನು ಹಿಡಿಯಲೆಂದು ಕೊಂಡೊಯ್ದಿದ್ದ 'ಸುವರ್ಣ ತ್ರಿಭುಜ' ಎಂಬ ದೋಣಿ ಸಹ ನಾಪತ್ತೆಯಾಗಿದೆ.

ಏಳು ಮಂದಿ ಮೀನುಗಾರರು ಕಣ್ಮರೆಯಾದ ಕುರಿತು ಡಿ.22ರಂದೇ ಮಲ್ಪೆಯ ಕರಾವಳಿ ರಕ್ಷಣಾ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದ್ದರೂ, ದಕ್ಷ ಮತ್ತು ತ್ವರಿತ ತನಿಖೆ ನಡೆಯಲಿಲ್ಲ ಎಂದು ದೋಣಿಯ ಮಾಲೀಕರ ಸಹೋದರ ಆರೋಪಿಸಿದ್ದಾರೆ. ಯಾವುದೇ ಮಾನದಂಡದಲ್ಲಿ ಕಂಡರೂ ಏಳು ಯುವಕರ ಕಣ್ಮರೆ ಒಂದು ಗಂಭೀರ ವಿಷಯ. ಈ ಕುರಿತು ನಮ್ಮ ರಕ್ಷಣಾ ವ್ಯವಸ್ಥೆಯು ಇಷ್ಟು ದಿನಗಳಾದರೂ ಯಾವುದೇ ಪ್ರಗತಿಯನ್ನು ಸಾಧಿಸದೇ ಇರುವುದು ತೀವ್ರ ಕಳವಳ ಹುಟ್ಟಿಸುತ್ತಿದೆ.

ಈ ಪ್ರಕರಣದ ಗಂಭೀರತೆಯನ್ನು ಎತ್ತಿತೋರಿಸಲು ಸಹ ಸಾಕಷ್ಟು ಪ್ರಯತ್ನಗಳಾಗಿವೆ. ಮೀನುಗಾರರ ಸಹಿತ 'ಸುವರ್ಣ ತ್ರಿಭುಜ' ನಾಪತ್ತೆಯಾಗಿ 11 ದಿನಗಳಾದಾಗ ಉಡುಪಿ ಕ್ಷೇತ್ರದ ಶಾಸಕರು ಪ್ರಧಾನಮಂತ್ರಿಗಳಿಗೆ ಪತ್ರ ಬರೆದು, ತಕ್ಷಣ ಕ್ರಮ ಕೈಗೊಳ್ಳಲು ಸೂಕ್ತ ಇಲಾಖೆಗಳಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದ್ದರು. ಅಷ್ಟೇ ಅಲ್ಲ, ದೂರ ಸಮುದ್ರದಲ್ಲಿ ಏಳು ಜನ ಮೀನುಗಾರರ ಕಣ್ಮರೆಗೂ, ಭಯೋತ್ಪಾದಕ ಚಟುವಟಿಕೆಗೂ ಸಂಬಂಧ ಇರಬಹುದು ಎಂಬ ಅನುಮಾನವನ್ನು ಸಹ ವ್ಯಕ್ತಪಡಿಸಿದ್ದರು. ಆದರೂ ಇದುವರೆಗೆ ಈ ಪ್ರಕರಣದ ಯಾವುದೇ ಪ್ರಗತಿ ಕಂಡಿಲ್ಲ. ಕಳೆದ 25 ದಿನಗಳಿಂದ ನಾಪತ್ತೆಯಾಗಿರುವ ಆ ಏಳು ಜನ ಮೀನುಗಾರರು ಮತ್ತು ದೋಣಿಯು ಪತ್ತೆಯಾಗದೇ ಇರುವುದು ನಮ್ಮ ದೇಶದ ಭದ್ರತಾ ವೈಫಲ್ಯವನ್ನು ಸೂಚಿಸುವಂತಿದೆ.

ಮುಂಬಯಿಯ ಪ್ರತಿಷ್ಠಿತ ತಾಜ್ ಹೋಟೆಲ್ ಮತ್ತು ಇತರ ಸ್ಥಳಗಳ ಮೇಲೆ 2008ರಲ್ಲಿ ಸಮುದ್ರದ ದಾರಿಯಲ್ಲಿ ಬಂದು ದಾಳಿ ನಡೆಸಿದ ಉಗ್ರರು 250ಕ್ಕೂ ಹೆಚ್ಚಿನ ಜನರನ್ನು ಸಾಯಿಸಿದ ಭೀಕರ ಘಟನೆ ಭಾರತದ ಇತಿಹಾಸದಲ್ಲಿ ದಾಖಲಾಗಿದೆ. ಆಗ ನಮ್ಮ ದೇಶದ ಮೀನುಗಾರಿಕಾ ದೋಣಿಯನ್ನು ಅಪಹರಿಸಿ, ಅದರಲ್ಲಿದ್ದ ಮೀನುಗಾರರನ್ನು ಕೊಂದು, ಅದೇ ದೋಣಿಯ ಮೂಲಕ ಮುಂಬೈ ಕರಾವಳಿಯನ್ನು ಪ್ರವೇಶಿಸಿ, ಕರಾವಳಿ ರಕ್ಷಣಾ ವ್ಯವಸ್ಥೆಯ ಕಣ್ಣಿಗೆ ಮಣ್ಣೆರಚುವಲ್ಲಿ ಉಗ್ರರು ಯಶಸ್ವಿಯಾಗಿದ್ದರು. ಈ ಕರಾಳ ಘಟನೆಯ ಹಿನ್ನೆಲೆಯಲ್ಲಾದರೂ, ಈಗಿನ ಪ್ರಕರಣವನ್ನು ತಕ್ಷಣ ಭೇದಿಸಿ, ಕಣ್ಮರೆಯಾಗಿರುವ ದೋಣಿಯನ್ನು ಮತ್ತು ಏಳು ಜನ ಮೀನುಗಾರರನ್ನು ಪತ್ತೆಹಚ್ಚಬೇಕಾಗಿದೆ. ಆ ಮೂಲಕ ನಮ್ಮ ಕರಾವಳಿಯ ಮೀನುಗಾರರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ಆದ್ಯತೆಯಿಂದ ಮಾಡುವ ತುರ್ತು ಜವಾಬ್ದಾರಿ ಕೇಂದ್ರ ಸರಕಾರದ ಮೇಲಿದೆ.

ಚಿತ್ರಸ್ಫೂರ್ತಿ



ಪ್ರಪಂಚದ ಸುಂದರ ಸಂಗತಿಗಳನ್ನು ಎಣಿಕೆ ಮಾಡುವಾಗ ನಿಮ್ಮನ್ನು ಸೇರಿಸಿಕೊಳ್ಳಲು ಮರೆಯಬೇಡಿ!

ತಿಳಿಸಾರ

## ಮಾನವೀಯ ಸೇವೆಗಳಿಗೆ ಸಾಕಷ್ಟು ನಿಧಿ ಇಲ್ಲ

ಜಾಗತಿಕವಾಗಿ ಹಲವಾರು ದೇಶಗಳ ಲಕ್ಷಾಂತರ ಜನ ಸಂಕಷ್ಟದಲ್ಲಿದ್ದು ಅವರಿಗೆ ಮಾನವೀಯ ನೆಲೆಯಲ್ಲಿ ನೆರವಾಗಲು ಬೃಹತ್ ನಿಧಿ ಸಂಗ್ರಹಣೆ ಆಗಬೇಕಾಗುತ್ತದೆ. ಸದ್ಯ ಪರಿಸ್ಥಿತಿ ಕೆಳ ಕಂಡಂತಿದೆ



41 ದೇಶಗಳಿಗೆ ಸೇವೆಯ ಅಗತ್ಯ ಇದೆ.

133.3 ದಶ ಲಕ್ಷ ಜನರಿಗೆ ನೆರವು ಬೇಕಾಗಿದೆ.

97.9 ದಶ ಲಕ್ಷ ಜನರಿಗೆ ಅದು ದೊರೆತಿದೆ.

ಜಾಗತಿಕವಾಗಿ ಇರುವ ನಿಧಿಯ ಅವಶ್ಯಕತೆ-24.93 ಶತಕೋಟಿ ಡಾಲರ್

ಜಾಗತಿಕವಾಗಿ ದೊರೆತಿರುವ ನಿಧಿಸಂಗ್ರಹ-22.71 ಶತಕೋಟಿ ಡಾಲರ್

ವಿಶ್ವಸಂಸ್ಥೆಯ ಮನವಿಯಿಂದ ಸಂಗ್ರಹವಾಗಿರುವುದು-14.29 ಶತಕೋಟಿ ಡಾಲರ್

ಇನ್ನಿತರ ಮೂಲಗಳಿಂದ-8.42 ಶತಕೋಟಿ ಡಾಲರ್

57.3% ಸಹಾಯದ ಪ್ರಮಾಣ.

ಕಾಕಾ ಹೋಟ್ಲು




ನಮ್ಮಲ್ಲಿ ಏನೂ ಸಮಸ್ಯೆ ಇಲ್ಲ, ಸಮ್ಮಿಶ್ರ ಸರಕಾರ ಸುಭದ್ರ: ಸಿಎಂ




ನಿಮ್ಮ ಸರಕಾರ ಅಭದ್ರ ಅಂತ ಹೇಳಿದ್ದು ಯಾರು? ಯಾವಾಗ?

# ಪ್ರತಿಭಾವಂತರಿಗೆ ಇಂದು ಅಂತರ್ಜಾಲವೇ ವೇದಿಕೆ!

TED ಟಾಕ್

ಭಾರತದಲ್ಲಿ ಎಲ್ಲವೂ ಉತ್ತಮ ಶೈಕ್ಷಣಿಕ ಪ್ರತಿಭೆಯನ್ನೇ ಅವಲಂಬಿಸಿದೆ. ಉದಾಹರಣೆಗೆ ನೀವು ತರಗತಿಯ ಜಾಣ ಹುಡುಗ/ಗಿಯಾಗಿದ್ದರೆ ಡ್ರಾಮಾದಲ್ಲಿಯೂ ನಿಮಗೇ ಮುಖ್ಯ ಪಾತ್ರ...ಎಷ್ಟೊಂದು ಹಾಸ್ಯಾಸ್ಪದ ಅಲ್ಲವೇ? ಬಾಲಿವುಡ್ ನಟರನ್ನೂ ಹೀಗೆ ವಿದ್ಯಾರ್ಹತೆ ಮೇಲೆ ಆರಿಸಿದ್ದರೆ ಏನು ಕತೆ?! 'ನೀವು ಹೀರೊ/ಹೀರೋಯಿನ್ ಆಗಬೇಕಾ? ಎಲ್ಲಿ ನಿಮ್ಮ ಅಂಕಪಟ್ಟಿ ತೋರಿಸಿ' ಅಂದರೆ ಎಷ್ಟು ಅಸಂಬದ್ಧ. ಜೂನಿಯರ್ ಇಮ್ರಾನ್ ಹಶ್ಮಿ ಆಗಬಲ್ಲವನು 'ಬಯಾಲಜಿ'ಯಲ್ಲಿ ಒಳ್ಳೇ ಮಾರ್ಕ್ಸ್ ಗಳಿಸಿರಬೇಕು ಎಂದು ನಿಬಂಧನೆ ಇಡುವುದು ಎಷ್ಟು ಭಯಂಕರ.

ಶಾಲೆಯಲ್ಲಿದ್ದಾಗ ನಮ್ಮ ಪಿ ಟಿ ಟೀಚರನ್ನು ಅಣಕಿಸುವುದು ನನ್ನ ಅಭ್ಯಾಸವಾಗಿತ್ತು. ಒಮ್ಮೆ ಇದನ್ನು ಸಮಾಜಶಾಸ್ತ್ರ ಕಲಿಸುವ ಉಪಾಧ್ಯಾಯರು ನೋಡಿಬಿಟ್ಟರು. ಇನ್ನೇನು ಹತ್ತಿರ ಬಂದು ನನ್ನನ್ನವರು ದಂಡಿಸುತ್ತಾರೆ ಎಂದು ನಾನು ಹೆದರಿ ನಿಂತಿದ್ದೆ. ಇನ್ನೊಂದು ಸಾರಿ ಹೀಗೆ ಮಾಡಿದರೆ ನಿನ್ನನ್ನು ಸಸ್ಪೆಂಡ್ ಮಾಡಿಸುತ್ತೇನೆ ಎನ್ನುತ್ತಾರೆ ಎಂದು ನಿರೀಕ್ಷಿಸಿದ್ದೆ. ಆದರೆ ಅವರು ಅದೇನನ್ನೂ ಮಾಡದೆ ' ನಾಟಕದಲ್ಲಿ ಒಂದು ಪಾತ್ರ ವಹಿಸುತ್ತೀಯಾ? ಈ ಸಾರಿ ನಾನು ಮಾಡಿಸುತ್ತಿದ್ದೇನೆ' ಎಂದರು. ನನಗದು ಅತ್ಯಂತ ನಾಟಕೀಯ ಗಳಿಗೆಯಾಗಿ ಮಾತು ಮರೆತು ನಿಂತೆ. ಖಂಡಿತ ನನಗೆ ನಟನಾಗಬೇಕೆಂಬ ಆಸೆಯಿತ್ತು. ಆ ನೆವದಲ್ಲಿ ಸ್ಟೇಜ್ ಹತ್ತಲು ಕಾತರನಾಗಿದ್ದೆ.

ಒಬ್ಬ ನ್ಯೂಸ್ ರಿಪೋರ್ಟರ್ ಪಾತ್ರವನ್ನು ಸರ್ ನನಗೆ ಕೊಟ್ಟರು. ಈಗ ನೋಡಿ, ಅದನ್ನುಹೇಗೆ ನಿಭಾಯಿಸಬೇಕು ಎಂಬ ಗೊಂದಲದಲ್ಲಿ ಬಿದ್ದೆ. ಎಂದಿಗೂ ಪತ್ರಿಕೆ ಓದಿದವನಲ್ಲ, 'ಬಾಂಬೇ ಟೈಮ್ಸ್' ಸಿಕ್ಕರೆ ಕಣ್ಣಾಡಿಸುತ್ತಿದ್ದುದು ಗಾಸಿಪ್ ಕಾಲಂಗಳ ಮೇಲೆ ಮಾತ್ರ. ಹೀಗೇ ಒದ್ದಾಡುತ್ತಿದ್ದಾಗ ಅದೇ ನಾಟಕದಲ್ಲಿ 'ಟ್ರಾಶ್ ಕಿಂಗ್' ಪಾತ್ರ ನಿರ್ವಹಿಸುತ್ತಿದ್ದ ನನ್ನ ಜ್ಯೂನಿಯರ್ ಒಂದು ದಿನ ರಿಹರ್ಸಲ್‌ಗೆ ಬರಲಿಲ್ಲ. ಅಧ್ಯಾಪಕರು ನೀನು ಅದನ್ನುಮಾಡು ಎಂದರು. ಸುಮ್ಮನೆ ಅವನ ಬದಲಿಯಂತೆ ನಟಿಸಲು ಬಯಸದ ನಾನು ಅದಕ್ಕೆ ನನ್ನದೇ ತಮಾಷೆಯ ಟಚ್ ನೀಡಿದೆ. ನಿರ್ದೇಶಕರಿಗೆ ನಿಜಕ್ಕೂ ಖುಷಿ ಆಯಿತು. ಸರಿ, ನ್ಯೂಸ್ ರಿಪೋರ್ಟರ್ ಬದಲು ನೀನು ಟ್ರಾಶ್‌ಕಿಂಗ್ ಆದರೇ ಚೆನ್ನ ಎಂದು ಹೇಳಿಬಿಟ್ಟರು. ಹೀಗಾಗಿ ನಾನು ಸ್ವಯಂಪ್ರತಿಭೆಯಿಂದ ಕಷ್ಟಪಟ್ಟು ಗಳಿಸಿದ ಮೊದಲ ಪಾತ್ರ ಸ್ನೇಹಿತರೇ, ಒಬ್ಬ ಟ್ರಾಶ್ ಕಿಂಗ್‌ದಾಗಿತ್ತು. ಆದರೆ ನನಗದು ದೊಡ್ಡ ಸಂಗತಿಯಾಗಿತ್ತು. ಪಾಪ, ನನ್ನ ಜ್ಯೂನಿಯರ್, ಒಂದು ದಿನ ಗೈರಾಗಿದ್ದಕ್ಕೆ ಪಾತ್ರವೇ ಅವನ ಕೈತಪ್ಪಿ ಹೋಯಿತು. ಮಾರನೇ ದಿನ ಶಾಲೆಗೆ ಬಂದಾಗ ನಾನು ಅದನ್ನು ನಿರ್ವಹಿಸಲಿರುವೆ ಎಂದು ಗೊತ್ತಾಯಿತು. (ಆಮೇಲೆ ಇನ್ನೆಂದೂ ಅವನು ತಪ್ಪಿಸಿಕೊಳ್ಳಲಿಲ್ಲವೆನ್ನಿ.)

ಸರಿ, ವಾರ್ಷಿಕೋತ್ಸವದ ದಿನ ನಮ್ಮ ನಾಟಕ ರಂಗಕ್ಕೇರಿತು. ನಾನು ಕಾಣಿಸಿಕೊಂಡು ಒಂದು ಸಂಭಾಷಣೆ ಹೇಳಿದ್ದೇ ತಡ ಜನ ನಕ್ಕು ಪ್ರೋತ್ಸಾಹಿಸಿದರು. ನನಗದು ಬಹಳ ಹಿತವೆನಿಸಿತು. ಹೀಗೆ ರಂಗದ ಮೇಲೆ ಬೇರೆ ಬೇರೆ ಪಾತ್ರವಾಗುವುದೇ ನನಗೆ ಬೇಕಾದದ್ದು, ನಾನೊಬ್ಬ ಕಲಾವಿದನಾಗಬೇಕು, ಅದೇ ನನಗೆ ಪರಮಪ್ರಿಯ ಎಂಬ ಯೋಚನೆಗಳು ಮೂಡಿದವು. ಅದೊಂದು ಸಂತಸದ ಅನುಭೂತಿ. ಹತ್ತನೇ ತರಗತಿ ಮುಗಿಯುವ ವೇಳೆಗೆ ನನ್ನ ಗುರಿ ಗಟ್ಟಿಗೊಂಡಿತು. ನನ್ನ ತಂದೆಯ ಬಳಿ ಹೋಗಿ ನಟನಾಗ ಬಯಸುವೆ ಎಂದು ಹೇಳಿದೆ. ಚೆನ್ನಾಗಿ ಕಲಿಯುವ ಒಬ್ಬ ಹುಡುಗ, ಹೀಗೆ ವಿದ್ಯಾಭ್ಯಾಸಕ್ಕೆ ತೊಡಕಾಗಬಹುದಾದ ನಟನಾವೃತ್ತಿಗೆ ಹೋಗುತ್ತೇನೆ ಎಂದರೆ ಪೋಷಕರಿಗೆ ನಿಜಕ್ಕೂ ಅದೊಂದು ಕಳವಳಕಾರಿ ಸಂಗತಿ.

ಆದರೆ ನನ್ನ ತಂದೆ ಬಹಳ ಶಾಂತವಾಗಿ ಅದನ್ನು ನಿಭಾಯಿಸಿದರು. ಒಂದು ಸಿಂಗಲ್ ಥಿಯೇಟರ್ ಒಡೆಯರಾಗಿದ್ದ (ಈಗ ಮಲ್ಟಿಪ್ಲೆಕ್ಸ್ ಹೊಂದಿದ್ದಾರೆ) ಅವರಿಗೆ ಸಿನಿಮಾ ಜಗತ್ತಿನ ಸಂಪರ್ಕ ಚೆನ್ನಾಗಿತ್ತು. ಹಾಗಾಗಿ 'ಆಯಿತು, ಮಗನೇ, ನಟನಾಗಬೇಕು ಎನ್ನುವುದು ನಿನ್ನ ಆಸೆಯಾದರೆ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಈ ಕ್ಷೇತ್ರದಲ್ಲಿ ತುಂಬ ಕಷ್ಟಪಡಬೇಕು ಎಂದು ಅನುಭವದಿಂದ ಬಲ್ಲೆ. ನಿನ್ನಲ್ಲ ಪ್ರತಿಭೆ, ಸಮಯ ಪಣಕ್ಕಿಟ್ಟರೂ ನಿನಗೆ ತಕ್ಷಣ ಯಶಸ್ಸು ಸಿಗದೇ ಇರಬಹುದು. ಆದ್ದರಿಂದ ದುರ್ಗಮವಾದ, ಉದ್ದಾನುದ್ದವಾದ ಹಾದಿಯೊಂದನ್ನು ಸವೆಸಲು ತಯಾರಿರಬೇಕು. ಅಷ್ಟಾದ ಮೇಲೆಯೂ ಅದು ನಿನ್ನನ್ನು ಎಲ್ಲಿಗೆ ಕರೆತಂದು ಬಿಡುತ್ತದೆ ಖಚಿತವಿಲ್ಲ. ಎಲ್ಲಿಗಾದರೂ ಕರೆದೊಯ್ಯುತ್ತದೆಯೇ ಹೇಳಲಾಗದು. ಅಷ್ಟೊಂದು ಹತಾಶೆ, ನಿರಾಶೆಗಳಿಗೆ ಅವಕಾಶ ಇರುವ ಪಥ ಅದು ಎಂದು ಎಚ್ಚರಿಸಲು ಬಯಸುತ್ತೇನೆ. ನಿನಗೆ ಏನಾಗಬೇಕೆಂದಿದೆಯೋ ಅದು ಈಡೇರಿಸಿಕೋ, ಅದಕ್ಕೆ ನನ್ನ ಯಾವ ಅಭ್ಯಂತರವೂ ಇಲ್ಲ. ಆದರೆ ಉದ್ಧಾರ-ಪತನ ಎರಡನ್ನೂ ಮಾಡಬಲ್ಲ ಆಯ್ಕೆಯನ್ನು ಸಂಭಾಳಿಸಲು ನಿನ್ನ ಕೈಯಲ್ಲಿ ಸಾಧ್ಯವೇ ಯೋಚಿಸು' ಎಂದರು.

ಏನು ಮಾರಾಯ, ನಾನಾಗ ಇನ್ನೂ ಹುಡುಗ. ಇಷ್ಟೆಲ್ಲ ಕೇಳಿ ತಣ್ಣಗಾದೆ. ನಟನಾಗಬೇಕೆಂಬ ಆಸೆಯ ಕದ ಮುಚ್ಚಿ, ಕಾಲೇಜು ಅಭ್ಯಾಸದಲ್ಲಿ ತೊಡಗಿಸಿಕೊಂಡೆ. ಅಲ್ಲೂ ಅಷ್ಟೆ. ಸುತ್ತಲಿದ್ದವರೆಲ್ಲ 'ಸೈನ್ಸ್ ತಗೋ'ಎಂದು ಉಪದೇಶಿಸಿದರು. ಆಮೇಲೆ 'ಎಂಜಿನಿಯರಿಂಗ್ ಓದು' ಎಂದು ಆಗ್ರಹಿಸಿದರು. ನಾನು ಪಾಲಿಸಿದೆ. ಅದರಲ್ಲಿ ಮತ್ತೆ, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಮತ್ತು ಕಂಪ್ಯೂಟರ್ ಸ್ಪೆಷಲ್ ವಿಷಯವಾಗಿದ್ದರೆ ಒಳ್ಳೆಯದು ಎಂಬ ಚರ್ಚೆಯಾಯಿತು. ಆದರೆ ನಾನು ಸಿವಿಲ್ ಆರಿಸಿಕೊಂಡೆ.

ಸೆಮಿಸ್ಟರ್, ವರ್ಷಗಳು ಉರುಳಿ, ನಾವೆಲ್ಲ ಅಸೈನ್‌ಮೆಂಟ್, ಜರ್ನಲ್ ಸಲ್ಲಿಸುವ ಸಮಯ. ಒಂದು ದಿನ ಕ್ಲಾಸ್‌ರೂಂನಲ್ಲಿ ಕುಳಿತಿದ್ದೆ. ಒಂದು ವಾರದ ಹಿಂದಿನಿಂದ ಮನಸ್ಸಿನಲ್ಲಿ ಅದೇ ಗುಂಗು. ಅಭಿನಯ ಕಲೆಯನ್ನು ನಾನು ಬೆಂಬತ್ತಬೇಕಿತ್ತು. ಪ್ರತಿ ವರ್ಷ ಏನೆಲ್ಲ ದೊಡ್ಡ ಸಂಗತಿಗಳು ಸಿನಿಮಾ ಕ್ಷೇತ್ರದಲ್ಲಿ ಸಂಭವಿಸುತ್ತಿವೆ. (ಅದೇ ವರ್ಷ ಟೀವಿಯಲ್ಲಿ 'ಮಹಾಭಾರತ' ತೆರೆ ಕಂಡಿತು. ಸಾಕಷ್ಟು ಕಲಾವಿದರು ಅದರಿಂದಾಗಿ ಬೆಳಕು ಕಂಡರು. ಎಷ್ಟೊಂದು ಹೊಸ ನಟ-ನಟಿಯರು ಕ್ಷೇತ್ರ ಪ್ರವೇಶಿಸುತ್ತಿದ್ದಾರೆ. ನಾನು ಸುಮ್ಮನುಳಿದು ತಪ್ಪು ಮಾಡಿದೆ... ಇದೇ ಆಲೋಚನೆ ಪೇರಿಸಿಕೊಳ್ಳುತ್ತಾ ಹೋಗಿ, ಒಂದು ದಿನ ನಾನು ಅಕ್ಷರಶಃ ಸಿಡಿದೆ. ಕಾಲೇಜಿನಿಂದ ಓಡಿಬಂದು ಮನೆಯಲ್ಲಿ ಕೂತು ಮನಃಪೂರ್ವಕ ಅತ್ತೆ.

ಏನೋ ಆರಿಸಿಕೊಂಡು, ಏನೋ ಓದುತ್ತಾ ಇರುವುದು... ಇದು ನನ್ನ ಅಸ್ಮಿತೆಯಲ್ಲ, ಇದು ನಾನಲ್ಲ, ನನಗೆ ಬೇಕಾಗಿರುವುದು ಬೇರೇನೋ ಇದೆ. ನನಗೆ ಪ್ರತಿಭೆಯಿರುವ ಆ ಇನ್ನೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕಿದೆ ಎಂದು ತೀವ್ರವಾಗಿ ಅನಿಸಿ ಮತ್ತೆ ತಂದೆಯ ಬಳಿ ಓಡಿದೆ. ಈ ಬಾರಿ ಅವರಿಗೆ ನನ್ನ ಆಸೆಯ ಉತ್ಕಟತೆ ಮನವರಿಕೆಯಾಯಿತು. ಆಯಿತು, ನಿನ್ನಿಚ್ಛೆಯಂತೆಯೇ ಆಗಲಿ. ನಟನಾಗುವ ಅವಕಾಶಕ್ಕಾಗಿ ಕಾಯಿ. ಬದುಕು ಒಂದು ದಾರಿ ತೋರಿಸುತ್ತದೆ ಎಂದು ಸಂತೈಸಿದರು. ಸರಿಯಾಗಿ ಒಂದು ತಿಂಗಳ ನಂತರ ನನ್ನ ಫೇಸ್‌ಬುಕ್ 'ಫೀಡ್'ನಲ್ಲಿ ಆರೂವರೆ ಸೆಕೆಂಡ್‌ಗಳ ಒಂದು ವಿಡಿಯೋ ನೋಡಿದೆ. ಗೆಳೆಯರೇ, ಅದು ಡೇವಿಡ್ ಲೋಪೆಜ್ ಎಂಬಾತ ನಿರ್ಮಿಸಿದ್ದ ಕೇವಲ ಆರೂವರೆ ಕ್ಷಣಗಳ ವಿಡಿಯೋ. ನನ್ನ ಜೀವನದ ಗತಿಯನ್ನೇ ಅದು ಬದಲಿಸಲಿದೆ ಎಂದು ಆಗ ಅನ್ನಿಸಿರಲಿಲ್ಲ.

ಅದೊಂದು ತಮಾಷೆಯ ವಿಡಿಯೋ. ಮನರಂಜನೆಯ ಹೊಸದೊಂದು ಪ್ರಕಾರದಂತೆ ಅದು ತೋರಿತು. ನಮ್ಮ ನಿರೂಪಕ ಅಳವಡಿಸಿದ 'ವೈನ್' ಯರಾದರೂ ಆರೂವರೆ ಕ್ಷಣ ಅವಧಿಯ ವಿಡಿಯೋ ತಯಾರಿಸಿ, ಪ್ರಸರಣಗೊಳಿಸಬಹುದಾದ ಒಂದು ಆ್ಯಪ್-ಸಾಫ್ಟ್‌ವೇರ್ ಸಾಧನ ಎಂಬುದು ಗೊತ್ತಾಯಿತು. ಹಾಸ್ಯ, ಸಂಗೀತ, ಕವಿತೆ...ಅದರ ವಿಷಯ ಈ ಯಾವುದೂ ಆಗಿರಬಹುದು. ನಾನೂ 'ವೈನ್' ಪ್ರಕಾರದಲ್ಲಿ ಒಂದು ಕೈ ನೋಡಬೇಕು ಎಂದು ಸಜ್ಜುಗೊಂಡೆ. ಇಲ್ಲಿ ನಿಮ್ಮ ಮುಂದೆ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ, ಅಂತಾರಾಷ್ಟ್ರೀಯ 'ವೈನರ್ಸ್'ರಿಂದ ಧಾರಾಳವಾಗಿ ಕಾಪಿ ಹೊಡೆದೆ.

ಅಂತೂ ನನ್ನದೊಂದು ಸ್ವಂತ 'ವೈನ್' ಅಪ್‌ಲೋಡ್ ಮಾಡಿದೆ ಮತ್ತು ನೋಟಿಫಿಕೇಶನ್‌ಗೆ ಕಾಯುತ್ತಾ ಕುಳಿತೆ. ಅದೋ, ಒಂದು ಬಂತು. ನೋಡಿ ಎದೆ ಧಸಕ್ಕೆಂದಿತು. ತಡಮಾಡದೆ ಅದನ್ನು ಅಳಿಸಿಹಾಕಿದೆ. ಎರಡನೆಯದು, ಮೂರನೆಯದು...ಹೀಗೇ ಮುಂದುವರಿಯುತ್ತಾ ಬರೀ ನೆಗೆಟಿವ್ ಕಾಮೆಂಟ್‌ಗಳೇ ಬಂದವು. ನಾನೂ ಹಟ ಬಿಡದೆ ಎಲ್ಲವನ್ನೂ ಅಳಿಸುತ್ತ ಒಂದು ಮೆಚ್ಚುಗೆಯ ಮಾತಿಗೆ ಕಾದೆ. ನೀವೂ ಕಲಿತುಕೊಳ್ಳಿ, ನಿಮ್ಮಿಂದ ಎಲ್ಲ ನೇತ್ಯಾತ್ಮಕತೆಯನ್ನು ಸಾರಾಸಗಟು ತೆಗೆದು ಹಾಕಬೇಕೆಂದರೆ ಹೀಗೇ ಮಾಡಬೇಕು!

ಮೂರು ವಿಡಿಯೋಗಳು ಅಪ್‌ಲೋಡ್ ಆದ ಮೇಲೆ ನಕಲು ಮಾಡುವುದು ಬೇಜಾರಾಯಿತು. 'ಏನಾದರೂ 'ದೇಸಿ' ಮಾಡು, ನಿನ್ನ ದೇಶದ್ದು, ನೀನೇ ಸ್ವತಃ ಯೋಚಿಸಿದ್ದು' ಎಂದು ನನ್ನನ್ನು ನಾನು ಹುರಿದುಂಬಿಸಿಕೊಂಡೆ. ಪ್ರತಿ ಹುಡುಗಿ ಸುಲಭವಾಗಿ, ಇಷ್ಟವಾಗಿ ಬೇಯಿಸುವ 'ಮ್ಯಾಗಿ'ಯನ್ನು ವಸ್ತುವಾಗಿ ಆರಿಸಿಕೊಂಡು ನನ್ನ ಪ್ರಥಮ ವೈನ್ ನಿರ್ಮಿಸಿದೆ. ಗೆಳೆಯರೆ, ಅದು ಭಾರಿ ಯಶಸ್ವಿಯಾಯಿತು. ಆ ಬಳಿಕ ಹೊಸ ನೋಟ, ರುಚಿ ಹೊಂದಿರುವ ವಿಡಿಯೋಗಳನ್ನು ನಾನು ಒಂದಾದಮೇಲೊಂದರಂತೆ ತಯಾರಿಸಿದೆ. ದೈನಿಕದ ಮಾಮೂಲಿ ಸಂಗತಿಗಳು, ಸುತ್ತಲಿನ ಮಾಮೂಲಿ ಜನರನ್ನೇ ವಸ್ತು-ವಿಷಯ ಮಾಡಿಕೊಂಡೆ. ಅಂದಹಾಗೆ, ಈ ಮಧ್ಯೆ ಎಂಜಿನಿಯರಿಂಗ್ ಸಹ ಮುಂದುವರಿಸಿದ್ದೆ ಎಂದು ಹೇಳುವುದನ್ನು ಮರೆಯುವಂತಿಲ್ಲ...



ನನ್ನ ಪ್ರಯೋಗಗಳಿಗೆ ಶುರುವಿನಲ್ಲಿ 200 ಬೆಂಬಲಿಗರು ಇದ್ದದ್ದು ಈಗ ಅವರ ಸಂಖ್ಯೆ 2,77,000ಕ್ಕೆ ಏರಿದೆ. ಅಂತೂ ಸೋಷಿಯಲ್ ಮೀಡಿಯಾದಿಂದ- ಎಷ್ಟೋ ಜನರಿಗೆ ಆದಂತೆ- ನನ್ನ ಜೀವನದಲ್ಲಿಯೂ ಏನೋ ಪರಿವರ್ತನೆ ಆಯಿತು. ನಿಮ್ಮ ವಿಷಯದಲ್ಲಿಯೂ ಅದು ನಿಜವಾಗಬಹುದು. ಮನಃಪೂರ್ವಕ ಪ್ರಯತ್ನಿಸಬೇಕಷ್ಟೆ. ನಾನು ಏನು ಹೇಳಲು ಪ್ರಯತ್ನಿಸುತ್ತಿದ್ದೇನೆಂದರೆ, ಪ್ರತಿಭೆಯನ್ನು ಹತ್ತಿಕ್ಕಿದರೆ ಯಾವುದೋ ಒಂದು ಬಿರುಕಿನಿಂದ ಅದು ಒಸರಲಾರಂಭಿಸುತ್ತದೆ. ನನ್ನ ಬದುಕಿನಲ್ಲಿ ಅಂತರ್ಜಾಲ ಅಂತಹ ಒಂದು ಬಿರುಕಾಯಿತು. ಬದುಕು ಯಾವುದೋ ದಾರಿ ಕಂಡುಕೊಳ್ಳುತ್ತದೆ ಎಂದು ನನ್ನ ತಂದೆ ಹೇಳಿದ ಹಾಗೆ, ಪ್ರತಿಭೆಯೂ ತನಗೆ ಬೇಕಾದ ಮಾರ್ಗ ತಾನೇ ಹುಡುಕುತ್ತದೆ. ನನ್ನ ಬದುಕಿನಲ್ಲಿ ಅಂತರ್ಜಾಲ ಅಂತಹ ಒಂದು ಬಿರುಕಾಯಿತು.

ಈಗ ಅದು ಇನ್ನೂ ದೊಡ್ಡದಾಗಿದೆ. ಹೆಚ್ಚು ಜನರನ್ನು ಒಳಗೊಳ್ಳಬಲ್ಲುದಾಗಿದೆ. ಅದಕ್ಕೆ ಯಾರಿಗಾದರೂ, ಯಾವುದಕ್ಕಾದರೂ ಪ್ರಸಿದ್ಧಿ ತಂದುಕೊಡುವ ತಾಕತ್ತಿದೆ. ಆಡಿಷನ್‌ಗಳಿಗೆಂದು ಮುಂಬಯಿಗೋ ಮತ್ತೆಲ್ಲಿಗೋ ಹೋಗುವ ಗೋಜೇ ಈಗ ಇಲ್ಲ. ಇಂಟರ್‌ನೆಟ್ ಈಗ ಯಾರಾದರೂ ಆರಿಸಿಕೊಳ್ಳಬಹುದಾದ ರಂಗಮಂಚ. ನಿಮಗೂ ಪರಿಚಿತವಾಗಿರಬಹುದಾದ ಹಿಂದಿ ಚಿತ್ರರಂಗದ ಆಡಿಷನ್‌ಗಳಲ್ಲಿ ಪ್ರತಿ ದಿನ ಲಕ್ಷಗಟ್ಟಲೆ ಕಲಾವಿದರು ಭಾಗವಹಿಸುತ್ತಾರೆ. ಅವರಲ್ಲಿ ಒಬ್ಬರಿಗೆ ಪಾತ್ರ ದೊರೆಯುತ್ತದೆ. ಉಳಿದವರು ನಿರಾಶರಾಗಿ ವಾಪಸಾಗುತ್ತಾರೆ. ಬೇಕಾದಷ್ಟು ಸಿನಿಮಾಗಳು ತಯಾರಾಗುತ್ತಿವೆ, ಬಂಡಿಗಟ್ಟಲೆ ನಿರ್ದೇಶಕರು ಸಿನಿಮಾ ಕ್ಷೇತ್ರ ಪ್ರವೇಶಿಸಿದ್ದಾರೆ ಎಂದರೂ ಬೆರಳೆಣಿಕೆಯ ಕೆಲವರಿಗೆ ಅವಕಾಶಗಳು ದೊರೆಯುತ್ತವೆ. ಅದು ಅವರ ನೈಜ ಯೋಗ್ಯತೆಯ ಕಾರಣದಿಂದಲೇ ಅಥವಾ ಪ್ರಭಾವಿಗಳ ಸಂಪರ್ಕ ಅವರಿಗೆ ಇರುವುದರಿಂದಲೇ ಎಂಬುದು ಬಗೆಹರಿಯದ ವಿಚಾರ. ಇಂಥ ವೇಳೆ ಸೋಷಿಯಲ್ ಮೀಡಿಯಾ ಒಂದು ಪರ್ಯಾಯವಾಗಿ ಕಾಣಿಸುತ್ತದೆ. ಅದೇ ಅಸಂಖ್ಯ ಪ್ರತಿಭಾನ್ವಿತರಿಗೆ ತೆರೆದುಕೊಂಡ ಸುವರ್ಣಾವಕಾಶವಾಗಿದೆ.

ನಾನಷ್ಟೇ ಅಲ್ಲ, ಉತ್ತಮ ಪ್ರತಿಭೆಗಳು, ಕೇವಲ ರೋಚಕತೆ ನೆಚ್ಚಿಕೊಂಡವರು (ಕಮಾಲ್ ಆರ್ ಖಾನ್ ಇದಕ್ಕೆ ಉದಾಹರಣೆ) ಹೀಗೆ ಎಲ್ಲರನ್ನೂ ಅಂತರ್ಜಾಲ ಬರಮಾಡಿಕೊಂಡಿದೆ. ಒಂದು ಅಂತಾರಾಷ್ಟ್ರೀಯ ಉದಾಹರಣೆ ನೀಡಬೇಕೆಂದರೆ, ಲೋಗನ್ ಪಾಲ್ ಎಂಬಾತ ವಾಸಿಸುವುದಕ್ಕೆ ಮನೆಯೂ ಇಲ್ಲದೆ ಬೀದಿಯಲ್ಲಿದ್ದ ನಿರಾಶ್ರಿತನಾಗಿದ್ದ. ತನ್ನ ವೈನರ್ ಕರಿಯರ್‌ಅನ್ನು ರಸ್ತೆಯಿಂದಲೇ ಆರಂಭಿಸಿದ ಆತನ ಬಳಿ ಇದ್ದುದು ಕೇವಲ ಒಂದು ಮೊಬೈಲ್ ಇಂಟರ್‌ನೆಟ್ ಸಂಪರ್ಕ. ಇಂದಾತ ಲಕ್ಷಗಟ್ಟಲೆ ಸಂಪಾದಿಸುತ್ತಿದ್ದಾನೆ. ವಿಶ್ವದ ಅತಿ ಹೆಚ್ಚು ಫಾಲೋಯರ್ಸ್ ಹೊಂದಿರುವ ವೈನರ್ ಆಗಿದ್ದಾನೆ.

ಅಂತರ್ಜಾಲ ಇಂದು ಕೇವಲ ಸುದ್ದಿ ಬಿತ್ತರಿಸುವ ಅಥವಾ ಜನರನ್ನು ಸಂಪರ್ಕದಲ್ಲಿರಿಸುವ ಮಾಧ್ಯಮವಾಗಿ ಅಷ್ಟೇ ಉಳಿದಿಲ್ಲ, ವಿಶ್ವದ ಬೃಹತ್ ವಾಣಿಜ್ಯ ಕಂಪನಿಗಳು ಅದರಲ್ಲಿ 'ವೆಬ್ ಸೀರೀಸ್' ಪ್ರಸಾರ ಮಾಡುತ್ತಿವೆ. ನೆಟ್‌ಫ್ಲಿಕ್ಸ್‌ನಂತಹ ಸಂಸ್ಥೆಗಳು ಇಂದು ಮನೆಮಾತಾಗಿವೆ. ಅವು ಬಿತ್ತರಿಸುತ್ತಿರುವ (ಸ್ಟ್ರೀಮಿಂಗ್) ಅನೇಕ ಕಾರ್ಯಕ್ರಮಗಳನ್ನು ನೀವೆಲ್ಲ ಖಂಡಿತ ವೀಕ್ಷಿಸಿರುತ್ತೀರಿ. ಮಾಡುತ್ತಿಲ್ಲ. ಯಾವುದೇ ಕತ್ತರಿ ಪ್ರಯೋಗವಿಲ್ಲ, ವಿಶ್ವದ ಎಲ್ಲೆಡೆ ಇರುವ ವೀಕ್ಷಕರನ್ನು ನೇರವಾಗಿ ತಲುಪಬಹುದು ಮುಂತಾದ ಅನುಕೂಲಗಳು ಈ ದಿಟ್ಟ ಪ್ರಯತ್ನಗಳಿಗೆ ದಕ್ಕಿವೆ.

ಒಟ್ಟಾರೆ ಹೇಳಬೇಕೆಂದರೆ, ನಾನೇನೂ ಅತ್ಯಂತ ಯಶಸ್ವಿಯಾಗಿ ಈ ಮಾಧ್ಯಮ ಬಳಸಿದ್ದೇನೆ ಅಂತಲ್ಲ. ಹಣ ನನ್ನ ಜೇಬಿನಲ್ಲಿ ತುಂಬಿ ತುಳುಕುತ್ತಿದೆ ಎಂದೂ ಅಲ್ಲ... ಅಂತರ್ಜಾಲವನ್ನು ನನ್ನ ಪ್ರತಿಭೆಯ ಮಾಧ್ಯಮವಾಗಿ ಬಳಸಿಕೊಂಡಿರುವುದು ನನಗೆ ತುಂಬ ಸಂತಸ ತಂದಿದೆ. ಎಲ್ಲರೂ ಅಂದರೆ ಒಂದು ಅಭಿವ್ಯಕ್ತಿ ಬೇಕಾದ ಎಲ್ಲರೂ ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಅವಕಾಶ ಸಿಕ್ಕಿರುವುದು ಬಹಳ ಕ್ರಾಂತಿಕಾರಿ ಸಂಗತಿ. ನಟರು, ಗಾಯಕರಷ್ಟೇ ಅಲ್ಲ, ಉತ್ತಮ ವೇದಿಕೆ ದೊರೆತಿರದ ಪ್ರತಿಭಾನ್ವಿತ ಬಾಣಸಿಗರು ಅದನ್ನು ಬಳಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಎಲ್ಲ ಸಾಂಪ್ರದಾಯಿಕ ವೇದಿಕೆಗಳನ್ನು ಹಿಂದಿಕ್ಕಿ, ಅಂತರ್ಜಾಲ ಇಂದು ಒಂದು ಮಹಾನ್ ವೇದಿಕೆಯಾಗಿದೆ.

ಆದ್ದರಿಂದ ಮಿತ್ರರೇ, ಯಾವುದಾದರೂ ಆಸೆಯನ್ನು, ಕನಸನ್ನು, ಮಹತ್ವಾಕಾಂಕ್ಷೆಯನ್ನು ನಿಮ್ಮಲ್ಲೇ ಬಚ್ಚಿಟ್ಟುಕೊಂಡಿದ್ದರೆ, ಅದನ್ನು ಹೊರಗೆಳೆಯಲು ಇದು ಸಕಾಲ. ಇಷ್ಟವಿರದ ಯಾವುದೋ ವೃತ್ತಿ ಮಾಡುತ್ತಾ ನೀರಸ ಜೀವನ ನಡೆಸುವುದನ್ನು ಬಿಡಿ. ನಿಮ್ಮೆಲ್ಲ ಪ್ರತಿಭೆಗಳನ್ನು 'ಶೋಕೇಸ್' ಮಾಡಲು ಸಾಮಾಜಿಕ ಮಾಧ್ಯಮಗಳನ್ನು ಯುಕ್ತವಾಗಿ ಬಳಸಿ ಎನ್ನುವುದಷ್ಟೇ ನನ್ನ ಸಂದೇಶ.

### ಆಶೀಶ್ ಚಂಚಲಾನಿ

ಇಪ್ಪತ್ತೇಳರ ಹರೆಯದ ಆಶೀಶ್ ಚಂಚಲಾನಿ, ಮಹಾರಾಷ್ಟ್ರ ಮೂಲದವರು. ಚಲನಚಿತ್ರೋದ್ಯಮದಲ್ಲೇ ತೊಡಗಿದ್ದ ಕುಟುಂಬದ ಹಿನ್ನೆಲೆ ಅವರದು. ನಟ ಅಕ್ಷಯ್ ಕುಮಾರ್ ಅವರಿಂದ ಸ್ಫೂರ್ತಿಗೊಂಡವರು. ಆದರೆ ಎಂಜಿನಿಯರಿಂಗ್ ಶಿಕ್ಷಣದಲ್ಲಿ ತೊಡಗಿ ತಮ್ಮ ನಟನೆಯ ಕನಸುಗಳನ್ನು ಕೆಲ ಕಾಲ ಮುಂದೂಡಿದ್ದರು. ಇದೀಗ ಮಹಾನ್ ವೇದಿಕೆಯಾದ ಅಂತರ್ಜಾಲ ಬಳಸಿ ಒಬ್ಬ ಯಶಸ್ವಿ ವೈನರ್ ಮತ್ತು ಯೂ ಟ್ಯೂಬ್ ಸೆನ್ಸೇಶನ್ ಆಗಿದ್ದಾರೆ. ಅವರ ಹಾಸ್ಯಪ್ರಧಾನ ವಿಡಿಯೋಗಳು ಮತ್ತು ಅಣಕಗಳು ಅತ್ಯಂತ ಜನಪ್ರಿಯವಾಗಿವೆ. 100ಕ್ಕೂ ಹೆಚ್ಚು ವಿಡಿಯೋಗಳನ್ನು ನಿರ್ಮಿಸಿ ಸುಮಾರು 6 ದಶಲಕ್ಷ ಚಂದಾದಾರವನ್ನುಗಳಿಸಿದ್ದಾರೆ.

# ಸಂತಸದ ಹುಡುಕಾಟ ಹೊರಗಲ್ಲ, ನಮ್ಮೊಳಗೇ ಆಗಬೇಕು!



ಗುರುಮನ

ಗೌರ್ ಗೋಪಾಲ್
editoped@vishwavani.news

> ಜೀವನದಲ್ಲಿ ಅವರಿಂದ ಹೀಗಾಯತು, ಇವರಿಂದ ಹಾಗಾಯಿತು ಎಂದು ಸುಲಭವಾಗಿ ಆರೋಪಿಸಿ ಬಿಡುತ್ತೇವೆ. ಆದರೆ ಅಸಲಿಗೆ ಎಲ್ಲದಕ್ಕೂ ನಾವೇ ಜವಾಬ್ದಾರರು. ಇನ್ನೊಬ್ಬರ ನಡೆವಳಿಕೆಯಿಂದ ಸಿಟ್ಟಿಗೇಳಬೇಕೋ ಬೇಡವೋ ಎಂಬುದು ನಮ್ಮ ಆಯ್ಕೆ. ಪ್ರತೀ ಸಲ ಸಿಟ್ಟನ್ನೇ ಆಯ್ಕೆ ಮಾಡಿಕೊಂಡರೆ ಜವಾಬ್ದಾರಿಯೂ ನಮ್ಮದೇ ಆಗುತ್ತದೆ. ದುಃಖವನ್ನು ಆಯ್ದುಕೊಳ್ಳಬೇಕೊ, ಸಂತೋಷವನ್ನೋ ಎಂಬುದೂ ನಮ್ಮ ಆಯ್ಕೆಯೇ.

ಒಮ್ಮೆ ಒಬ್ಬ ಶ್ರೀಮಂತ ಮಹಿಳೆ ಸಂತೋಷವನ್ನು ಹುಡುಕಿಕೊಂಡು ಕೌನ್ಸಿಲರ್ ಬಳಿ ಹೋದಳು. ನನಗೆ ಜೀವನದಲ್ಲಿ ಎಲ್ಲವೂ ಇದೆ. ಉಡಲು ದುಬಾರಿ ಬ್ರಾಂಡೆಡ್ ಬಟ್ಟೆಗಳಿವೆ, ಓಡಾಡಲು ಕಾರಿದೆ, ಮನೆಯಲ್ಲಿ ಎಲ್ಲ ಲಕ್ಷುರಿ ವಸ್ತುಗಳಿವೆ. ಆದರೂ ನಾನು ಸಂತೋಷವಾಗಿಲ್ಲ, ನನಗೆ ಸಂತೋಷವಾಗಿರುವುದು ಹೇಗೆ ತಿಳಿಸಿಕೊಡಿ ಎಂದಳು.

ಆಗ ಕೌನ್ಸಿಲರ್ ಅಲ್ಲೇ ಕಸ ಗುಡಿಸುತ್ತಿದ್ದ ಆಯಮ್ಮನನ್ನು ಕರೆದರು. ನೀನು ಹೇಗೆ ಸಂತೋಷವಾಗಿದ್ದೀಯಾ ಅಂತ ಇವರಿಗೆ ಸ್ವಲ್ಪ ಹೇಳು ಎಂದರು. ಅವಳು ಪೊರಕೆಯನ್ನು ಅಲ್ಲೇ ಬಿಸಾಡಿ, ನೆಲದ ಮೇಲೆ ಕೂತು ತನ್ನ ಕಥೆ ಹೇಳತೊಡಗಿದಳು.

ಈಗ ಆರು ತಿಂಗಳ ಹಿಂದೆ ನನ್ನ ಗಂಡ ಮಲೇರಿಯಾದಿಂದ ತೀರಿ ಹೋದ. ಅದಾಗಿ ಮೂರು ತಿಂಗಳಿಗೆ ನನ್ನ ಮಗ ಕಾರ್ ಅಪಘಾತಕ್ಕೆ ಸಿಲುಕಿ ನನ್ನ ಬಿಟ್ಟು ನಡೆದ. ನನಗೆ ಜೀವನವೇ ಶೂನ್ಯ ಎನಿಸತೊಡಗಿತು. ನಾನು ನಗುವುದನ್ನು ಮರೆತೆ. ನನಗೋಸ್ಕರ ಅಡುಗೆ ಮಾಡಲೂ ಮನಸು ಬರಲಿಲ್ಲ. ತಿನ್ನದೇ ಬದುಕಿರುವಷ್ಟು ದಿನ ಬದುಕಿದ್ದೆ. ನಾನು ನನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳದೇ ತಿಂಗಳುಗಳೇ ಆಗಿತ್ತು.

ಒಂದು ದಿನ ಮಳೆ ಹೊಯ್ಯುತ್ತಿತ್ತು. ಒಂದು ಬೆಕ್ಕಿನ ಮರಿ ಮಳೆಯಲ್ಲಿ ನೆಂದು ತೊಪ್ಪೆಯಾಗಿ ನನ್ನನ್ನೇ ಹಿಂಬಾಲಿಸಿಕೊಂಡು ಬರತೊಡಗಿತು. ನನಗದನ್ನು ನೋಡಿ ಅಯ್ಯೋ ಎನಿಸಿತು. ಮನೆಗೆ ಎತ್ತಿಕೊಂಡು ಬಂದು ಬೆಚ್ಚಗೆ ಬಟ್ಟೆಯಲ್ಲಿ ಸುತ್ತಿ ಒರೆಸಿದೆ. ಬಿಸಿ ಬಿಸಿ ಹಾಲು ಕಾಯಿಸಿ ಹಾಕಿದೆ. ಅದನ್ನು ಕುಡಿದು ರಟ್ಟಿನ ಪೆಟ್ಟಿಗೆಯಲ್ಲಿ ಬೆಚ್ಚಗೆ ಮಲಗಿತು. ಅದನ್ನು ನೋಡಿ ನನಗೆ ಮೊದಲ ಬಾರಿ ಸಂತೋಷವಾಗಿ ನಗು ಬಂತು. ಆ ದಿನ ನಾನು ಎಷ್ಟೋ ತಿಂಗಳುಗಳ ನಂತರ ಮೊದಲ ಬಾರಿ ನಕ್ಕೆ.

ಆಗ ಯೋಚಿಸಿದೆ. ಒಂದು ಬೆಕ್ಕಿನ ಮರಿಗೆ ಉಪಕಾರ ಮಾಡಿದ್ದಕ್ಕೆ ನನಗೆ ಇಷ್ಟೊಂದು ಸಂತೋಷವಾಯಿತು. ಬಹುಶಃ ಬೇರೆಯವರಿಗೆ ಉಪಕಾರ ಮಾಡಿದರೆ ನನಗೆ ಸಂತೋಷವಾಗಬಹುದು ಎಂದುಕೊಂಡು ಮರುದಿನ ಪಕ್ಕದ ಮನೆಯವರಿಗೆ ಹಲ್ವಾ ಮಾಡಿಕೊಟ್ಟೆ. ಅವರು ತಿಂದು ಚೆನ್ನಾಗಿತ್ತು ಎಂದು ಸಂತೋಷಪಟ್ಟರು. ಅದರ ನಂತರ ನನ್ನ ಮನೆಯ ಸುತ್ತಲಿದ್ದರಿಗೆ ನನ್ನ ಕೈಲಾದಷ್ಟು ಸಹಾಯ ಮಾಡತೊಡಗಿದೆ. ಅಂದಿನಿಂದ ನಾನು ನಿದ್ರೆ ಬರದೆ ಒದ್ದಾಡಿದ್ದೇ ಇಲ್ಲ. ನೆಮ್ಮದಿ ಸಂತೋಷ ಈಗ ನಮ್ಮನೆಯಲ್ಲೇ ಕಾಲು ಮುರಿದು ಬಿದ್ದಿದೆ ಎಂದಳು.

ಸಂತೋಷ ಯಾರಿಗೆ ಯಾವಾಗ ಯಾವುದರಲ್ಲಿ ಸಿಗುತ್ತದೆ ಎಂದು ತಿಳಿದಿಲ್ಲ. ನಮ್ಮ ಸಂತೋಷವನ್ನು ಇನ್ಯಾರೋ ಹುಡುಕಿಕೊಡಲು ಸಾಧ್ಯವೇ ಇಲ್ಲ. ಅದು ನಮ್ಮೊಳಗೇ ಇದ್ದು, ನಮ್ಮದೇ ಪರಿಶ್ರಮದಿಂದ ಮಾತ್ರ ನಮಗೆ ಗೊತ್ತಾಗುತ್ತದೆ. ನನಗೆ ಯಾವುದು ಸಂತೋಷ ಕೊಡುತ್ತದೆ ಎಂಬ ಪ್ರಶ್ನೆ ಹಾಕಿಕೊಂಡು, ಬೇರೆ ಬೇರೆ ಸಂಗತಿಗಳನ್ನು ಮಾಡುತ್ತ ಹೋದಾಗ ಎಲ್ಲೋ ಒಂದೆಡೆ ಅದರ ಇರುವು ತಿಳಿಯುತ್ತದೆ. ನಮ್ಮ ಸಂತೋಷದ ಅಸ್ತಿತ್ವವನ್ನು ಹುಡುಕುವುದು ನಮ್ಮ ಕೈಲೇ ಇದೆ.

• • •

ಆಕೆ ಒಬ್ಬಳು ಗೃಹಿಣಿ. ಚೆನ್ನಾಗಿ ಓದಿದವಳು. ಮಕ್ಕಳಿಗೆ ಹೋಂ ವರ್ಕ್ ಮಾಡಿಸುವುದು, ಮನೆಕೆಲಸ, ಅಡುಗೆ, ಗಂಡ ಎಂದು ಜೀವನ ಸಾಗಿ ಹೋಗುತ್ತಿತ್ತು. ಆದರೂ ಆಕೆಯೊಳಗೊಂದು ಕೊರಗು. ಅದೇನೆಂದರೆ ನಾನು ಜೀವನದಲ್ಲಿ ಏನೇನೂ ಮಾಡಲಿಲ್ಲ ಎಂದು. ಯಾವಾಗಲೂ ಅದನ್ನೇ ಹೇಳುತ್ತಿದ್ದಳು. ಹೀಗಾಗಿ ಆಕೆ ಸದಾ ಅತೃಪ್ತಿಯಲ್ಲೇ ಬದುಕುತ್ತಿದ್ದಳು. ತನ್ನನ್ನು ಯಾರೂ ಬೆಂಬಲಿಸುವುದಿಲ್ಲ ಎಂದು ಆಕೆಗೆ ಅನ್ನಿಸುತ್ತಿತ್ತು. ತನಗೆ ಸ್ಫೂರ್ತಿ ನೀಡಲು ಯಾರೂ ಇಲ್ಲ ಅನ್ನಿಸುತ್ತಿತ್ತು. ಇನ್ನೊಬ್ಬರ ಜತೆ ತನ್ನ ಬದುಕನ್ನು ಹೋಲಿಸಿಕೊಂಡು ಅಸಮಾಧಾನಗೊಳ್ಳುತ್ತಿದ್ದಳು. ಒಟ್ಟಿನಲ್ಲಿ ಆಕೆ ಸಂತೋಷವಾಗಿರಲಿಲ್ಲ.

ಒಮ್ಮೆ ಮನೆ ಪಕ್ಕದ ಮರದ ಮೇಲೆ ಕರಪರ ಸದ್ದಾಗುವುದು ಕೇಳಿಸಿತು. ಅದೇನೆಂದು ನೋಡಿದರೆ, ಕಾಗೆಯೊಂದು ಮರದ ಕಡ್ಡಿಗಳನ್ನು ತನ್ನ ಕೊಕ್ಕಿನಿಂದ ಎಳೆದು ತೆಗೆಯಲು ನೋಡುತ್ತಿತ್ತು. ಪದೇ ಪದೇ ಪ್ರಯತ್ನಿಸಿದರೂ ಸೋಲುತ್ತಿತ್ತು. ಕರ್ ಎನ್ನುತ್ತ ಎಲ್ಲಿಗೋ ಹಾರಿ ಹೋಗುತ್ತಿತ್ತು. ಮತ್ತೆ ಬರುತ್ತಿತ್ತು, ಎಳೆಯುತ್ತಿತ್ತು.ಹೀಗೆಯೇ ಎರಡು ದಿನ ನಡೆಯಿತು. ಕಾಗೆಯ ಬಾಯಲ್ಲಿ ನೈಲಾನ್ ದಾರಗಳು, ಒಣ ಹುಲ್ಲುಗಳು, ಗ್ಯಾರೇಜಲ್ಲಿ ಎಸೆದ ವೇಸ್ಟ್ ದಾರಗಳು ಇವೆಲ್ಲ ಇರುತ್ತಿತ್ತು.

ಅರೆ! ಈ ಕಾಗೆಗೆ ಯಾರೂ ಸಹಾಯ ಮಾಡುವವರಿಲ್ಲವಲ್ಲ! ಆದರೂ ಅದು ತನಗಾಗಿ ಗೂಡು ಕಟ್ಟಿಕೊಳ್ಳುತ್ತಿದೆ. ಇದರ ಜತೆಗೆ ಇನ್ಯಾವ ಕಾಗೆಯೂ ಬಂದಿಲ್ಲ. ಆದರೆ ಈ ಕಾಗೆ ಅದ್ಯಾವುದಕ್ಕೂ ಕೊರಗದೆ ತನಗೋಸ್ಕರ ಗೂಡು ಕಟ್ಟಿಕೊಳ್ಳುತ್ತಿದೆಯಲ್ಲ. ಗೃಹಿಣಿಗೆ ನಾಚಿಕೆಯಾಯಿತು. ನಾನು ಮಾತ್ರ ನನಗೋಸ್ಕರ ಎದ್ದು ನಿಲ್ಲದೆ ಸದಾ ಅವರಿವರಿಂದ ನಿರೀಕ್ಷಿಸಿ ಸೋತೆನಲ್ಲ. ಈಗಲೂ ಕಾಲ ಮಿಂಚಿಲ್ಲ. ನಾನಿನ್ನೂ ಬದುಕಿಯೇ ಇದ್ದೇನೆ. ಈಗಲೂ ತಡವಾಗಿಲ್ಲ ಎಂದುಕೊಳ್ಳುತ್ತ ಹೊಸ ಹುರುಪಿನಿಂದ ಕೆಲಸ ಹುಡುಕಲು ತೊಡಗಿದಳು. ಉತ್ತಮ ಆರಂಭ ಎಂದರೆ ಅರ್ಧ ಕೆಲಸ ಆದಂತೆಯೇ.

ಜೀವನ ನಮಗೆ ಇಂಥದನ್ನು ಹೀಗೆಯೇ ಮಾಡು ಎಂದು ಸೂಚನೆ ಕೊಟ್ಟು ಕಳಿಸುವುದಿಲ್ಲ. ಆದರೆ ನಾವೇನಾಗಬೇಕೆಂಬುದನ್ನು ಮೊದಲು ತೀರ್ಮಾನಿಸಿಯೇ ಈ ಜಗತ್ತಿಗೆ ಬಿಟ್ಟಿರುತ್ತದೆ. ಅದರ ಪ್ರಕಾರವೇ ನಮ್ಮ ಬದುಕು ಸಾಗುವುದು. ಕೊರಗಿ ಏನೇನೂ ಪ್ರಯೋಜನವಿಲ್ಲ. ಮೊದಲು ನಮಗೋಸ್ಕರ ನಾವು ಏನನ್ನಾದರೂ ಮಾಡಲು ಎದ್ದು ನಿಲ್ಲಬೇಕು. ಆಗ ಜೀವನ ತಾನಾಗೇ ನಮಗೆ ಪೂರಕವಾದ ಸಹಾಯ ಒದಗಿಸುತ್ತದೆ.

• • •

ಒಂದು ಚಂದದ ಫ್ಯಾಮಿಲಿ. ಗಂಡ ಹೆಂಡತಿ ಇಬ್ಬರೂ ಸಾಫ್ಟ್‌ವೇರ್ ಇಂಜಿನೀಯರ್‌ಗಳು. ಇಬ್ಬರೂ ಕೈ ತುಂಬಾ ಸಂಪಾದಿಸುತ್ತಿದ್ದರು. ಮನಸಿಗೆ ಕಂಡಂತೆ ಖರ್ಚು ಮಾಡಿ ಹಾಯಾಗಿದ್ದರು. ಒಮ್ಮೆ ಹೆಂಡತಿ ಬಂದು, ರೀ ನಮ್ಮ ಮನೆಯ ಗೌರಮ್ಮನಿಗೆ ಊರಿಗೆ ಹೋಗಬೇಕಂತೆ ಮೂರು ದಿನ. ಅವಳ ಮಗಳ ಮನೆಗೆ ಹೋಗುತ್ತಿದ್ದಾಳಂತೆ. ನಾವು ಅವಳಿಗೆ 500 ರು. ಬೋನಸ್ ಕೊಡೋಣ್ವಾ ಕೇಳಿದಳು.



ಈಗ್ಯಾಕೆ ಬೋನಸ್? ದೀಪಾವಳಿ ಇನ್ನೂ ದೂರ ಇದ್ಯಲ್ವಾ ಅಂದ ಗಂಡ. ಹೌದು. ಆದ್ರೆ ಅವಳು ಹೋಗ್ತಿರೋದು ಮಗಳ ಮನೆಗೆ. ಪಾಪ ಏನಾದರೂ ತಗೋತಾಳೆ, ಕೊಡೋಣ್ವಾ ಎಂದಳು. ನೀನು ಸುಮ್ಮನೆ ಭಾವನೆಗೆ ಬೀಳ್ತಿದೀಯಾ, ಬೇಡ ಎಂದ. ಹಾಗಲ್ಲ, ನಾವು ಒಂದು ದಿನ ಪಿಜ್ಜಾ ತೆಗೆದುಕೊಳ್ಳುವುದು ಬೇಡ. ಆ ದುಡ್ಡಲ್ಲಿ ಗೌರಮ್ಮನಿಗೆ 500 ರುಪಾಯಿ ಕೊಡೋಣ. ಖುಷಿಯಾಗ್ತಾಳೆ ಎಂದಳು ಹೆಂಡತಿ. ಆತ ಸರಿ ಎಂದ.

ಮೂರು ದಿನ ಕಳೆಯಿತು. ಗೌರಮ್ಮ ಬಂದಳು. ನೀನು ಮಗಳ ಮನೆಗೆ ಹೋಗಿದ್ದೆಯಂತೆ ಹೌದೇನಮ್ಮ ಕೇಳಿದ ಗಂಡ. ಹೌದಣ್ಣ, ಅಕ್ಕ ರು. 500 ಕೊಟ್ಟಿದ್ದರು. ಅದರಲ್ಲಿ ನನ್ನ ಅಳಿಯಂಗೊಂದು ಬೆಲ್ಟು, ಮೊಮ್ಮಗಳಿಗೆ ಬಳೆ, ಮಗಳಿಗೆ ಸಿಹಿತಿಂಡಿ, ಒಂದಷ್ಟು ದೇವಸ್ಥಾನದ ಹುಂಡಿಗೆ ಹಾಕಿ ಉಳಿದಿದ್ರಲ್ಲಿ ಮೊಮ್ಮಗನಿಗೆ ಸ್ಟೇಶನರಿ ಸಾಮಾನು ಕೊಡ್ಸಿ ಬಂದೆ ಅಣ್ಣಾ. ತುಂಬಾ ಉಪಕಾರ ಆಯ್ತು ನಿಮ್ಮಿಂದ ಎಂದಳು.

ಗಂಡ ಯೋಚಿಸತೊಡಗಿದ. 500 ರುಪಾಯಲ್ಲಿ ಇಷ್ಟೆಲ್ಲ ಕೊಂಡಳೆ? ಅವನ ತಲೆಯಲ್ಲಿ ಆರು ಪೀಸ್ ಪಿಜ್ಜಾ ಓಡತೊಡಗಿತು. ಆರು ಪೀಸ್ ಪಿಜ್ಜಾದ ಕಾಸಲ್ಲಿ ಇಷ್ಟೆಲ್ಲ ಬರುವುದೆ? ಅವನಿಗೀಗ ಪಿಜ್ಜಾದ ಇನ್ನೊಂದು ಮುಖ ಕಾಣತೊಡಗಿತು.

ಒಂದೇ ಮೊತ್ತ ಒಬ್ಬರಿಗೆ ಒಂದೇ ವಸ್ತು ಒದಗಿಸಿಕೊಟ್ಟರೆ, ಇನ್ನೊಬ್ಬರಿಗೆ ಹಲವಾರು ವಸ್ತುಗಳನ್ನು ಒದಗಿಸುತ್ತದೆ. ಹಣದ ಬೆಲೆ ಅವರವರ ಅಗತ್ಯದ ಮೇಲೆ ನಿರ್ಧಾರವಾಗುತ್ತದೆ.

• • •

ಒಮ್ಮೆ ಒಬ್ಬ ಸನ್ಯಾಸಿ ಧ್ಯಾನ ಮಾಡಲೆಂದು ದೋಣಿಯೇರಿ ಸಮುದ್ರದ ನಡುವೆ ಹೊರಟ.ಸಾಮಾನ್ಯವಾಗಿ ನಡು ಸಾಗರದಲ್ಲಿ ಅಲೆಗಳೇಳುವುದಿಲ್ಲ. ಶಾಂತವಾಗಿರುತ್ತದೆ. ದೋಣಿಯನ್ನು ಅಲ್ಲಿ ನಿಲ್ಲಿಸಿ, ಸುಯ್ಯನೆ ಬೀಸುವ ಗಾಳಿಯ ಸದ್ದಿನ ನಡುವೆ ಧ್ಯಾನ ಮಾಡತೊಡಗಿದ. ಬಹು ಹೊತ್ತು ಅದೇ ಸ್ಥಿತಿಯಲ್ಲಿ ಕಳೆದ. ಆಗೀಗ ಸಮುದ್ರದ ನೀರಿನ ಸಣ್ಣ ಏರಿಳಿತ ಬಿಟ್ಟರೆ ಅಲ್ಲಿ ಬೇರೇನೂ ಸದ್ದಿರಲಿಲ್ಲ.ಕೆಲವು ತಾಸು ಕಣ್ಣು ಮುಚ್ಚಿ ಹಾಗೇ ಕುಳಿತಿದ್ದ. ಇದ್ದಕ್ಕಿದ್ದಂತೆ ಅವನ ದೋಣಿಗೆ ಏನೋ ಬಂದು ಬಡಿದಂತಾಯ್ತು. ಈತ ಕಣ್ಣು ಬಿಡಲಿಲ್ಲ. ಮತ್ತೆ ಮತ್ತೆ ಬಂದು ಬಡಿಯಿತು. ಸನ್ಯಾಸಿಗೆ ಅಪಾರ ಸಿಟ್ಟು ಬಂತು.

ಕಣ್ಣು ಮುಚ್ಚಿಯೇ ಆಲೋಚಿಸತೊಡಗಿದ. ತಾನಿಲ್ಲಿ ತನ್ನ ಪಾಡಿಗೆ ಧ್ಯಾನ ಮಾಡುತ್ತ ಕುಳಿತರೂ ಈ ಪ್ರಪಂಚ ಸುಮ್ಮನಿರುವುದಿಲ್ಲವಲ್ಲ. ಅದ್ಯಾರದು ವಿಘ್ನ ಸಂತೋಷಿ ನೋಡಿಯೇ ಬಿಡುತ್ತೇನೆ ಎಂದುಕೊಂಡು ಕಣ್ಣು ಬಿಟ್ಟ. ನೋಡಿದರೆ ಅದೊಂದು ಖಾಲಿ ದೋಣಿಯಾಗಿತ್ತು. ಎಲ್ಲಿಂದಲೋ ತೇಲಿ ಬಂದಿತ್ತು ಎನಿಸುತ್ತದೆ. ಸನ್ಯಾಸಿ ತಕ್ಷಣ ಎಚ್ಚೆತ್ತುಕೊಂಡ. ತನಗೆ ಸಿಟ್ಟು ಬರಲು ಈ ದೋಣಿ ಕಾರಣವಲ್ಲ. ಸಿಟ್ಟು ನನ್ನೊಳಗೇ ಇದೆ. ಕಾರಣ ಈ ದೋಣಿಯನ್ನು ನೋಡುವ ಮೊದಲೇ ನನಗೆ ಸಿಟ್ಟು ಬಂದಿತ್ತು. ನನಗೆ ಸಿಟ್ಟು ಬಂದಿದ್ದು ದೋಣಿ ಬಡಿದಿದ್ದರಿಂದ ಅಲ್ಲ, ಅದರ ಬಡಿತದಿಂದ ನಾನು ಪ್ರೇರಿತನಾಗಿದ್ದಕ್ಕೆ ಎಂದು ತನ್ನ ಭಾವನೆಗಳ ಜವಾಬ್ದಾರಿ ತಾನೇ ತೆಗೆದುಕೊಂಡ.

ಜೀವನದಲ್ಲಿ ಅವರಿಂದ ಹೀಗಾಯತು, ಇವರಿಂದ ಹಾಗಾಯಿತು ಎಂದು ಸುಲಭವಾಗಿ ಆರೋಪಿಸಿ ಬಿಡುತ್ತೇವೆ. ಆದರೆ ಅಸಲಿಗೆ ಎಲ್ಲದಕ್ಕೂ ನಾವೇ ಜವಾಬ್ದಾರರು. ಇನ್ನೊಬ್ಬರ ನಡೆವಳಿಕೆಯಿಂದ ಸಿಟ್ಟಿಗೇಳಬೇಕೋ ಬೇಡವೋ ಎಂಬುದು ನಮ್ಮ ಆಯ್ಕೆ. ಪ್ರತೀ ಸಲ ಸಿಟ್ಟನ್ನೇ ಆಯ್ಕೆ ಮಾಡಿಕೊಂಡರೆ ಜವಾಬ್ದಾರಿಯೂ ನಮ್ಮದೇ ಆಗುತ್ತದೆ. ದುಃಖವನ್ನು ಆಯ್ದುಕೊಳ್ಳಬೇಕೊ, ಸಂತೋಷವನ್ನೋ ಎಂಬುದೂ ನಮ್ಮ ಆಯ್ಕೆಯೇ.

• • •

ಒಂದು ದೊಡ್ಡ ಶಹರದ ಆಚೆ ದೊಡ್ಡದೊಂದು ಗೋಡೆಯಿತ್ತು. ಅಲ್ಲೊಬ್ಬ ದಾರ್ಶನಿಕನಿದ್ದ. ಆತ ಆ ಶಹರವನ್ನು ಪ್ರವೇಶಿಸುವ ಎಲ್ಲರಿಗೂ ಮೊದಲು ಕಾಣುತ್ತಿದ್ದ. ಒಮ್ಮೆ ಒಂದು ಪ್ರವಾಸಿಗರ ಗುಂಪು ಬಂದು ಈ ಶಹರದ ಜನರು ಹೇಗಿದ್ದಾರೆ? ಒಳ್ಳೆಯವರಾ? ಕೆಟ್ಟವರಾ ಎಂದು ಕೇಳಿದರು. ಅದಕ್ಕವನು ನೀವೀಗ ಬಂದ ಸ್ಥಳದ ಜನರು ಹೇಗಿದ್ದರು ಎಂದು ಕೇಳಿದ. ಅವರೆಲ್ಲ ಕೆಟ್ಟವರಿದ್ದರು ಎಂದಿತು ಗುಂಪು. ಹಾಗಾದರೆ ಇಲ್ಲಿನ ಜನರೂ ಕೆಟ್ಟವರೇ ಎಂದ ದಾರ್ಶನಿಕ. ಒಂದು ವೇಳೆ ತಾವೀಗ ಬಂದ ಊರಿನ ಜನರು ಒಳ್ಳೆಯವರಾಗಿದ್ದರು ಎಂದು ಗುಂಪು ಹೇಳಿದ್ದರೆ, ಇಲ್ಲಿನ ಜನರೂ ಒಳ್ಳೆಯವರೇ ಎಂದು ಹೇಳುತ್ತಿದ್ದ.

ಎಲ್ಲವೂ ನಮ್ಮ ದೃಷ್ಟಿಕೋನದಲ್ಲೇ ಇರುತ್ತದೆ. ನಾವು ನೋಡುವ ಕನ್ನಡಕದ ಬಣ್ಣದಲ್ಲೇ ಜಗತ್ತು ನಮಗೆ ಕಾಣುವುದು. Selective listening ಎನ್ನುವುದು ಇದಕ್ಕೇ. ದೃಷ್ಟಿಯಂತೆ ಸೃಷ್ಟಿ ಎಂಬ ಮಾತು ಕೂಡ ಇದಕ್ಕೆ ಹೊಂದುತ್ತದೆ.